ಮಾತನಾಡದಿರುವುದು ಕ್ಷೇಮವಲ್ಲವೇ? ತನ್ನನ್ನು ಕರೆಯದಿದ್ದರೆ ತನಗೆ ಕೊಡಲಾದ ರೂಮಿನಲ್ಲಿ ಸುಮ್ಮನೆ ಇದ್ದುಬಿಡುತ್ತಿದ್ದಳು. ಸುನಿಲನಿಗೆ ಇದು ಅರ್ಥವಾಯಿತು. ಆದರೆ, ಮಿಕ್ಕವರು ಅವಳಿಗೆ ಇಂಗ್ಲಿಷ್ ಬರದು, ಅದಕ್ಕೇ ಹೀಗಾಡುತ್ತಾಳೆ ಎಂದರು. ಇದೇನೇ ಆದರೂ ಸುನಿಲ್ ಬಂದು ಮೂರು ದಿನಗಳಾದರೂ ಮದುವೆಯ ಮಾತಾಡಲಿಲ್ಲ. ರಾಗಿಣಿ ಸ್ವಲ್ಪ ಧೈರ್ಯ ತೆಗೆದುಕೊಂಡು ಮೆಲುದನಿಯಲ್ಲಿ ಅವನನ್ನು ಕೇಳಿದರು. "ಏನಪ್ಪಾ, ಇದೇ ಹುಡುಗಿನೇ ಆಗಬೇಕ? ಇಲ್ಲಿ ನಮಗೆ ಗೊತ್ತಿರುವ ಹಾಗೆ ಬೇಕಾದಷ್ಟು ಒಳ್ಳೆ ಹುಡುಗೀರು ಇದಾರೆ." ಸಮಾಧಾನವಾಗಿಯೇ ನುಡಿದ ಸುನಿಲ್ – "ಯಾರನ್ನ ಮದುವೆ ಆಗಬೇಕು ಅನ್ನೋ ನಿರ್ಧಾರ ನನ್ನದು. ನೀವಾಗೇ ನಿಂತು ಲಗ್ನ ಮಾಡ್ತೀರೋ, ನಾನೇ ಮಾಡಿಕೊಳ್ಳಲೋ, ಹೇಳಿ ಸಾಕು." ಒಮ್ಮೆಗೇ ಕಣ್ಣಲ್ಲಿ ನೀರು ಹರಿದುಬಂತು ರಾಗಿಣಿಗೆ. "ನಿನ್ನಿಷ್ಟ" ಎಂದರು.

ಮದುವೆಯ ಮಾತುಕತೆ ಬಹಿರಂಗವಾಗಿ ನಡೆಯಲೇ ಇಲ್ಲ. ಮಗನಿಗೆ ತಾನೇ ಬೇಕಾಗಿರುವುದು, ಅವನೇ ಪ್ರಾರಂಭಿಸಲಿ ಎಂದು ಅಗರ್ವಾಲ್ ಮತ್ತು ರಾಗಿಣಿಗೆ, ನಾನು ಬಂದಿರುವ ಕಾರಣ ಅವರಿಗೆ ಗೊತ್ತಿದೆ. ಅವರೇ ಮುಂದೆ ಬರಲಿ ಎಂದು ಸುನಿಲನಿಗೆ. ಎಲ್ಲರ ಮನಸ್ಸಿನಲ್ಲಿಯೂ ಈ ವಿಷಯ ಕುದಿಯುತ್ತಿದ್ದರೂ ಎಲ್ಲರೂ ಹೆದರಿ ಮೌನತಾಳಿದರು.

> **'ದುಡ್ಡು ಕೊಟ್ಟು ರಿಂಕೊನ ದೂರಮಾಡಬಹುದು ಎನಿಸಿತಾ, ಪ್ರಶಾಂತ್ ಅಗರವಾಲ್? ನಿಮ್ಮ ದುಡ್ಡನ್ನ ನೀವೇ ಇಟ್ಟುಕೊಳ್ಳಿ. ಇದೇ ಕಡೇ ಮಾತು. ಇಲ್ಲಿಗೆ ಮುಗಿಯಿತು ನನ್ನ ನಿಮ್ಮ ಸಂಬಂಧ. ಎಂದಿಗೂ ನಿಮ್ಮ ಮುಖ ನೋಡುವುದಿಲ್ಲ...'**

ವ್ಯವಹಾರ ಚತುರ ಅಗರ್ವಾಲ್. ಅವರ ಬಿಸನೆಸ್ ಪ್ಲ್ಯಾನ್ ಇದು. ಸುನಿಲ್ ಹೇಗಾದರೂ ಅಮೆರಿಕಾಕ್ಕೆ ವಾಪಸ್ ಬಂದರೆ ಅವನಿಗೆ ತಮ್ಮದೇ ಆದ ಯಾವುದಾದರೂ ಕಂಪೆನಿಯನ್ನು ಕೊಡಬಹುದು; ಇಲ್ಲವೇ ಅವನಿಗೆ ಹಣಸಹಾಯ ನೀಡಿ ಅವನದೇ ಆದ ಲೀಗಲ್ ಫರ್ಮ್ ಒಂದನ್ನು ತೆರೆಯಬಹುದು. ಮೊದಲು ಮಗನಲ್ಲಿ ಕೇಳಿಕೊಂಡರು – "ಇಬ್ಬರೂ ಇಲ್ಲಿಯೇ ಬಂದುಬಿಡಿ. ಬೇಕಾದಷ್ಟು ಸಾಧ್ಯತೆಗಳಿವೆ." ಮಗ ಒಂದೇ ಮಾತಿನಲ್ಲಿ ಉತ್ತರಿಸಿದ – "ರಿಂಕೊಗೆ ಅಮೆರಿಕಾ ಆಗುವುದಿಲ್ಲ. ಈ ದೇಶ ಬರೀ ದುಡ್ಡಿಗೆ ಸರಿ. ಸಂಸ್ಕೃತಿ ಸ್ವಲ್ಪವೂ ಇಲ್ಲ ಇಲ್ಲಿ."

ನಾಲ್ಕನೆಯ ದಿನ ಮಗ ಸ್ನಾನದಲ್ಲಿರುವುದನ್ನು ಗಮನಿಸಿ ಅಗರ್ವಾಲ್ ರಿಂಕೊಳ ರೂಮಿಗೆ ಬಂದರು. ಹೆದರಿ ನಿಂತಳು ಆಕೆ.

"ಹೆದರಬೇಡ, ನಿನ್ನ ಜತೆ ಸ್ವಲ್ಪ ಮಾತನಾಡಬೇಕು."

ಸುಮ್ಮನಿದ್ದಳು ಆಕೆ.

"ನೀವಿಬ್ಬರೂ ಇಲ್ಲಿಯೇ ಬಂದು ನೆಲೆಸಿದ್ದರೆ ಚೆನ್ನಾಗಿತ್ತು. ಒಪ್ಪುವುದಿಲ್ಲ ಸುನಿಲ್. ನೋಡು, ನೀನು ತುಂಬಾ ಒಳ್ಳೆಯ ಹುಡುಗಿ. ನಿನ್ನನ್ನು ಭೇಟಿ ಮಾಡಿದ್ದು ಬಹಳ ಸಂತೋಷ. ಆದರೆ, ಮತ್ತೊಂದು ವಿಶೇಷವಾದ ಅಂಶ ಇದೆ. ನೀನು ಬೆಳೆದು ಬಂದ ಸಂಸ್ಕೃತಿ ಬೇರೆ, ಸುನಿಲನದು